Regd No B G. 155

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

27—1—1965

ಪ್ರವಾ ಜ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಸಂಪಾದಕರು - ಆಲ್ಮನೆ ಪಂಕ್ಷೆದಾರ್ ಎಂ ಏ ಸುಬ್ಬರಾಯಪ್ಪ ಬಿ ಎಲ್

ಬಿಳಿಕೆರೆ ಹತ್ತಿರದಲ್ಲಿ ಕಾರ್ ಅವಘಡದಲ್ಲಿ ನಾಲ್ವರ ಮರಣ

ಪಾರಿತೋಷಕ

ವಿಶ್ವವಿಖ್ಯಾತ ಜೋಗ್ ಜಲಪಾತದ ಎಣ್ಣೆ ಬಂಗಿನ ವರ್ಣಾಂಜಿತ ಚಿತ್ರವನ್ನು ಪ್ರಧಾನಿ ಶಾಸ್ತ್ರಿಗಳ ಹಸ್ತ ಅನೇಕಾನೇಕ ರಾಷ್ಟ್ರ ಭಾರಿ ಚಿತ್ರಗಳ ಬೌಲ್ಸ್‌ಗೆ ವಾರಿ ತೋಷಕವಾಗಿ ಅರ್ಪಿಸಲಾಯಿತು : ಇದನ್ನು ಕಲಾರಸಿದವರು ಶ್ರೀ ರಮಾಲೆ ಜನ್ಮ ಬಸವಯ್ಯನವರು.

ಚುನಾವಣೆ ಇಲ್ಲ

ಬೆಂಗಳೂರು— ಜನವರಿ 27 ರಂದು ನಡೆಯಬೇಕಿದ್ದ ಅನೇಕಲ್ ಮುನಿಸಿಪಲ್ ಚುನಾವಣೆಯನ್ನು ಹಿಂಗಾಮಿ ನಿಲ್ಲಿಸುವಂತೆ ಹೈ ಕೋರ್ಟು ಕಡೆ ಅಜ್ಜಿ ಇತ್ತಿದೆ

ಬಂಧನ

ಮದರಾಸು— ಪ್ರಜಾರಾಜ್ಯ ದಿನೋತ್ಸವನನ್ನು ಹಿಂದೀ ಬಲೋದ್ಬಂಧಕ್ಕಾಗಿ ವ್ಯಸನದ ದಿನವಾಗಿ ಆಚರಿಸಲು ನಿರ್ಧರಿಸಿದ್ದ ಡಿ ಎಂ ಕೆ ಪಕ್ಷದ ಪ್ರಮುಖ ನಾಯಕರ ಬಂಧನ ಮೊನ್ನೆ ಪ್ರಾರಂಭವಾಯಿತು : ಅಣ್ಣಾದೊರೈ, ಮನೋಹರ್ ಅರಂಗನಾಸಿ ಮುಂತಾದವರು ಬಂಧಿಸಲ್ಪಟ್ಟರು.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ ಸಂಪತ್ಕೃಷ್ಣ ಜೋಯಿಸರವರಿಂದ

28 ಗುರುವಾರ ಪಕಾದಶಿ ಜ್ಯೇಷ್ಠ

★

ಹಾಸನ— ಒಂದು ಭೋಜನ ಶಾಲೆಯ ಮಾಲೀಕನು ಬೋರ್ಡಿಂಗಿಗಳಿಂದ ರೂ 600 ಪಡೆದುಕೊಂಡು ಪರಾರಿಯಾಗಿರುವನು.

ಪ್ರಶಂಸೆ

ಬೆಂಗಳೂರು— ರಾಜ್ಯಕ್ಕೆ ಮೂರು ದಿನಗಳ ಭೇಟಿಗೆ ಆಗಮಿಸಿದ ಪ್ರಧಾನಿ ಶಾಸ್ತ್ರಿಗಳು, ಮೈಸೂರು ಒಂದು ಪ್ರಮುಖ ರಾಜ್ಯವೆಂದರು — ಪ್ರಧಾನಿಗಳು ಜೋಗ್‌ನಿಂದ ಬಂದ ನಂತರ ಪೌರ ಸನ್ಮಾನ ನೀಡಲಾಯಿತು : ಮೇಯರ್ ಶ್ರೀ ನಾಗಣ್ಣನವರು ಅಡ್ರೆಸ್ಸನ್ನು ಗಾಂಧಿ ಕಂಡಿಗೆಯನ್ನು ಅರ್ಪಿಸಿದರು.

ಪ್ರಧಾನಿಗಳು

ಬೆಂಗಳೂರು— ಪ್ರಧಾನಿ ಶಾಸ್ತ್ರಿಗಳು ತಾವು ನೋಡುವುದಕ್ಕೆ ಏನೂ ಅರಿಯಲಾರದಂತೆ ಕಂಡುಬಂದರೂ, ತಾವು ಅಷ್ಟು ಅರಿಯದವನಲ್ಲವೆಂದು ಹೇಳಿದರು

ಕುಜು ಬಿತ್ತು

ನವದೆಹಲಿ— ಬೊಕಾರೋ ಉಕ್ಕಿನ ಕಾರ್ಖಾನೆ ನಿರ್ಮಾಣಕ್ಕೆ ಭಾರತ-ರಷ್ಯಾ ರಾಜಿ ಮಾಡಿದವು

× ಬೆಂಗಳೂರು— ಮೈಸೂರು ಸರಕಾರವು ಅಂತರ ಜಿಲ್ಲಾಗಳಲ್ಲಿ ಅಕ್ಕಿ ಭತ್ತ ಸಾಗಾಣಿಕೆಯನ್ನು ನಿರ್ಬಂಧಿಸಿದೆ.

ಬಿಳಿಕೆರೆಯ ಬಳಿ ನಿನ್ನೆ ಮಧ್ಯಾಹ್ನ

ಸುಮಾರು ಹನ್ನೆರಡೂವರೆ ಘಂಟೆ ಸಮಯದಲ್ಲಿ ಸರ್ಕಾರಿ ಬಸ್ಸಿಗೆ ಕಾರೊಂದು ಡಿಕ್ಕಿ ಹೊಡೆದು ಕಾರಿನಲ್ಲಿದ್ದ 4 ಮಂದಿ ಸ್ಥಳದಲ್ಲಿ ಮೃತರಾಗಿದರೆಂದು ವರದಿ ಆಗಿದೆ ವೇಗವಾಗಿ ಬರುತ್ತಿದ್ದ ಕಾರನ್ನು ನೋಡಿ ಡ್ರೈವರ್ ಬಸ್ಸು ನಿಲ್ಲಿಸಿದನೆಂದು ಕಾರು ಒಂದು ಬಸ್ಸಿಗೆ ಡಿಕ್ಕಿ ಹೊಡೆಯಿತೆಂದೂ ವರದಿ ಆಗಿದೆ

ಗಣರಾಜ್ಯ ಉತ್ಸವ

ಮೈಸೂರು ಪೌರಸಭೆ ಆಶ್ರಯದಲ್ಲಿ ನಿನ್ನೆ ನಡೆದ ಗಣರಾಜ್ಯ ದಿನಾಚರಣೆಯಲ್ಲಿ ಮಂತ್ರಿ ಶ್ರೀ ಕೆ ಪುಟ್ಟಸ್ವಾಮಿಯವರು ಧ್ವಜಾರೋಹಣಮಾಡಿದರು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು

ಗಲಭೆ

ಸೊಂಡಿ ರಸ್ತೆಯ ಹೊಟಲು ನಟರಾಜ ನಿನ್ನೆ ಆರಂಭ ಸಿನಿಮಾ ನಟರ ನೇತೃತ್ವದಲ್ಲಿ ಆಗಬೇಕಾಗಿದ್ದ ಗಲಭೆ ಆದ ಕಾರಣ ಪೋಲೀಸರುಹಗುರುವಾಗಿ ಬಲ ಪ್ರಯೋಗ ಮಾಡಿದರು

ವಾರ್ತಾ ವಿಶೇಷಗಳು:

ಬೆಂಗಳೂರು— ಗೌರ್ನರ ಅಧಿಕಾರವು ಕೇವಲ ಆಲಂಕಾರಿಕವೂ ಅಥವ ರಾಜಕೀಯ ಪೇಷನ್ನು ಮಾತ್ರ ಸಾಧ್ಯವೆಂದೂ ಅನೇಕರು ನುಡಿಯುವುದು ಸರಿಯಿಲ್ಲವೆಂದೂ, ಆ ಪದವಿಯು ಅವಶ್ಯಕವಾದುದೆಂದೂ ಉಪಯುಕ್ತವಾದುದೆಂದೂ, ಮಧ್ಯ ಪ್ರದೇಶದ ಗೌರ್ನರಾಗಿ ನೇಮಕವಾಗಿರುವ ಶ್ರೀ ಕೆ ಸಿ ರೆಡ್ಡಿ ಹೇಳಿದರು.

★

ತಿರುವನಂತಪುರಂ— ಗೌರ್ನರು ಅಲಂಕಾರ ಪ್ರತಿಮೆ ಅಥವಾ ಹೂಕಡಿಕೆ ಮಾತ್ರವಾಗಿರಲಾರದೆಂದೂ, ರಾಜ್ಯಾಂಗ ರೀತಿ ಅವರಿಗೆ ಬೇಕಾದಷ್ಟು ಕೆಲಸವನಿದೆಯೆಂದೂ ಗೌರ್ನರು ಗಿರಿ ಹೇಳಿದರು.

★

ಬೆಂಗಳೂರು— 8 ರಾಷ್ಟ್ರಗಳ ಉಪನ್ಯಾಸ ಪ್ರವಾಸಗಳನ್ನು ಅನೇಕ ವಿದೇಶಗಳಲ್ಲಿ ಸಂಘಟಿಸಿದ ಮೈಸೂರು ಶ್ರೀಮನ್ಮಹಾರಾಜರೂ, ಮದರಾಸು ರಾಜ್ಯಪಾಲರು ಆದ ಶ್ರೀ ಜಯಚಾಮರಾಜ ಒಡೆಯರೂ ಟೋಕಿಯೋದಿಂದ ಈ ಸಂಜೆ ಇಲ್ಲಿಗೆ ಬರುತ್ತಾರೆ

★

ಬೆಂಗಳೂರು— ಜನವರಿ 29 ಮತ್ತು 30 (ಸರ್ವೋದಯ ದಿನ) ವಧಾಗೃಹಗಳಲ್ಲಿ ಪ್ರಾಣಿವಧೆಯಿಲ್ಲವೆಂದೂ, ಸರ್ವೋದಯದಿಂದು ಮಾಂಸ ಮಾರಾಟವಿಲ್ಲವೆಂದೂ ಪ್ರಕಟವಾಗಿದೆ.

★

ನವದೆಹಲಿ— ಮೊನ್ನೆ ರಾಷ್ಟ್ರಾಧ್ಯಕ್ಷರು ಮಾಡಿದ ಭಾಷಣದಲ್ಲಿ— ಜನರ ವೈಕಮತ್ಯದಿಂದ ವರ್ತಿಸಿ, ದುಷ್ಕಾರ್ಯಗಾರರು ಮತ್ತು ಕಳ್ಳವ್ಯಾಪಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವ ನೀತಿಗೆ ಸಹಕರಿಸಿ, ದೇಶದಲ್ಲಿನ ಉತ್ಕಟ ಆಹಾರ ಪರಿಸ್ಥಿತಿಯನ್ನು ಪರಿಹರಿಸಬೇಕೆಂದು ತಿಳಿಸಿದರು

Central Food Technological Research Institute
— MYSORE —
Tender Notification

No. 2/65

Sealed tenders are hereby invited for the award of contract to run the Cycle Stand at this Institute for Calender Year 1965. The last date for receipt of the tenders is 31-1-65. Intending tenderers may please contact the Lab. Supervisor (gen) on any working day for the terms and conditions of the lease which will be available on payment of a fee of Rs 0-50 P.

ADMINISTRATIVE OFFICER

ಸಮಯೋಚಿತ ಸೂಕ್ತಿಗಳು

ಗುಣ (ಅಲಂಕಾರ) ಗಳಿಂದ ಕೂಡಿಂದಿದ್ದರೂ ಒಂದು ಉಚಿತ ಸಂದರ್ಭದಲ್ಲಿ ಆಡಿದ ಮಾತು ಶೋಭಿಸುತ್ತದೆ : ಅತಿ ಕಾಲದಲ್ಲಿ ರಮಣಿಯನಿಗೆ ಭೂಷಣವಿಲ್ಲದಿರುವುದೂ ಭೂಷಣವೇ.

ಶ್ರುತಿಯಿಲ್ಲದ ಬಾಹ್ಮಣ ಕೆಟ್ಟ, ತೃಪ್ತನಾದ ಅರಸನು ಕೆಟ್ಟ, ನಾಚದ ಕುಲೀನ ಹೆಂಗಸು ಕೆಟ್ಟಳು.

ಕ್ರಮಿಕವಾಗಿ ಅಧ್ಯಯನ ಮಾಡದಿದ್ದಲ್ಲಿ ಶಾಸ್ತ್ರವು ವಿಷವಾಗುತ್ತದೆ ; ಅಜೀರ್ಣದಲ್ಲಿ ಊಟವು ವಿಷ : ಸಭೆಯು ಮೂರ್ಖನಿಗೆ ವಿಷ ; ಮುದುಕನಿಗೆ ತರುಣಿಯು ವಿಷ

ಸೀತೆಯು ಅತಿ ಸುಂದರಿಯಾದುದರಿಂದ ಅಪಹರಿಸಲ್ಪಟ್ಟಳು ; ಅತಿಯಾದ ಗರ್ವದಿಂದ ರಾವಣನು ಹತನಾದನು ; ಅತಿ ದಾನಿಯಾದುದರಿಂದ ಬಲಿಯು ಕಟ್ಟಿಬಿದ್ದನು ; (ಆದುದರಿಂದ) ಅತಿಯನ್ನು ಎಲ್ಲಾ ಕಡೆಯಲ್ಲಿಯೂ ಬಿಡಬೇಕು.

ಹೆಚ್ಚಾದ ಪರಿಚಯದಿಂದ ಅವಜ್ಞೆ (ತಿರಸ್ಕಾರ) ಉಂಟಾಗುತ್ತದೆ ಯಾವಾಗಲೂ ಹೋಗುವುದು (– ಬರುವುದರಿಂದ ಅನಾದರ ಉಂಟಾಗುತ್ತದೆ ; ಮಲಯ ಪರ್ವತದಲ್ಲಿ ಬೇಡರ ಹೆಂಗಸರು ಗಂಧದ ಮರವನ್ನು ಕಟ್ಟಿಗೆಯಾಗಿ ಉಪಯೋಗಿಸುತ್ತಾಳೆ

ಕ್ಷಮೆ ಎಂಬ ಧನವನ್ನು ಯಾರು ಕೈಯಲ್ಲಿದೆಯೋ, ಅವನನ್ನು ದುರ್ಜನರು ಏನು ಮಾಡಬಲ್ಲರು ? ಹುಲ್ಲಿಲ್ಲದ ಕಡೆಯಲ್ಲಿ ಬಿದ್ದ ಬೆಂಕಿಯು ತಾನಾಗಿ ನಂದಿಹೋಗುವುದು

ಮಕ್ಕಳಿಲ್ಲದವನಿಗೆ ಗತಿಯಿಲ್ಲ ; ಸ್ವರ್ಗವೆಂಬುದೂ ಇಲ್ಲವೇ ಇಲ್ಲ : ಅದುದರಿಂದಲೇ ಮಕ್ಕಳ ಸುಖವನ್ನು ಕಂಡುಬಳಿಕ ತಪಸ್ಸಿಯಾಗುವುದು ; (ವಾರ್ಧಕದಲ್ಲಿ ಗೃಹಸ್ಥಾಶ್ರಮವನ್ನು ಕೈಗೊಳ್ಳುವುದೆಂದರ್ಥ) [ಮಂ. ಪ್ರ.]

ಗೋಸಂರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಕನ್ನಡನಾಡಿನಲ್ಲಿ ಗೋಸಂರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ನ್ಯೆಪೈ ; ಗೋಸಂರಕ್ಷಣೆ ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಶೀಘ್ರವಾಗಿ ನವೀಕರಿಸಬೇಕಾಗಿ ವಿನಂತಿ

ರಾಷ್ಟ್ರ ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಗಳು (ದ ರೈಲ್ವೆ), ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಲಕ್ಷೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4

ವುಡ್‌ಲ್ಯಾಂಡ್ಸ್ ಶಿ ಸ್ 22-1-'65 ರಿಂದ
ಅಮೋಘ ಆರಂಭ

ಬೊಂಬಾಯಿನಲ್ಲಿ ಈಗ ಯಶಸ್ವಿಯಾಗಿ 19 ನೇ ವಾರದಲ್ಲಿ ನಡೆಯುತ್ತಿರುವ
ಅಚ್ಚುವೆಚ್ಚನ ಕಿಶೋರ್ ಫಿಲಂಸ್ ರವರ ಮನಮೋಹಕ ಹಿಂದಿ ಚಿತ್ರ

ದೂರ್‌ಗಗ್ ಕಿ ಚಾವ್‌ಮೇ

ನಾಯಕ— ಕಿಶೋರ್‌ಕುಮಾರ್, ಸುನಿಲ್‌ದತ್ ಚೌಧರಿ, ಮತ್ತು ಅಮಿತ ಗಂಗೋಲಿ

[ದಿನವಹಿ 3 ಪ್ರದರ್ಶನಗಳು]

ಆಪೆರಾ— ಅಮೋಘ 2 ನೇ ವಾರ

ಬೊಬ್ಬಲಿ ಯುದ್ಧಮು [ತೆಲುಗು]

ನಾಯಕ— ಎನ್ ಟಿ ರಾಮರಾವ್, ಭಾನುಮತಿ, ಎಂ ಆರ್ ರಾಧಾ, ಜಮುನಾ
ವಿಜಯಲಕ್ಷ್ಮಿ, ರಾಜನಾಲಾ, ಎಸ್ ವಿ ರಂಗರಾವ್ [ದಿನ 3 ಆಟಗಳು]

ಆಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

SHAKTI
SUDHA

Superb Tonic

Help The ' Gorakshana '



" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ